# ಅಂಧರ ಅಂದದ ಸಾಧನೆ




ಅಂಧ ಮಹಿಳಾ ಟಿ20 ಕ್ರಿಕೆಟ್ ವಿಶ್ವಕಪ್ ಜಯಿಸಿದ ಭಾರತ ತಂಡದ ಆಟಗಾರ್ತಿಯರ ಸಂಭ್ರಮ

ತುಮಕೂರು ಜಿಲ್ಲೆಯ ಕರಿತಿಮ್ಮನಹಳ್ಳಿಯ ಕಡುಬಡತನದ ಕುಟುಂಬದಲ್ಲಿ ಜನಿಸಿದ ಹುಡುಗಿ ದೀಪಿಕಾ ಟಿ.ಸಿ. ಐದು ತಿಂಗಳು ಮಗುವಾಗಿದ್ದಾಗ ಉಗುರಿನಿಂದ ಪರಚಿಕೊಂಡು ಒಂದು ಕಣ್ಣಿನ ದೃಷ್ಟಿ ಕಳೆದುಕೊಂಡ ಹುಡುಗಿ ದೀಪಿಕಾ.

ಮೊದಲೇ ಹಾಸಿ ಹೊದೆಯುವಷ್ಟು ಬಡತನ. ಹಳ್ಳಿಯ ಪರಿಸರದಲ್ಲಿ ಹೆಣ್ಣುಮಕ್ಕಳ ಬಗೆಗಿನ ಕಟ್ಟಳೆಗಳು ಒಂದು ಕಡೆ. ಇದೆಲ್ಲದರ ಜೊತೆಗೆ ಭಾಗಶಃ ಅಂಧತ್ವ ಕಾಡಿತು. ಅಜುಬಾಜು ಮನೆಯವರ ವ್ಯಂಗ್ಯಗಳು ಪ್ರತಿನಿತ್ಯವೂ ಈ ಹುಡುಗಿಯ ಮನಸ್ಸು ಗಾಸಿಗೊಳಿಸುತ್ತಿದ್ದವು. ಆದರೆ ಅಂದು ಅವಹೇಳನ ಮಾಡಿದ ಜನರೇ ಇಂದು ದೀಪಿಕಾಳನ್ನು ಮೆಚ್ಚಿ ಕೊಂಡಾಡುತ್ತಿದ್ದಾರೆ.

ದೀಪಿಕಾ ನಾಯಕತ್ವದ ಅಂಧ ಮಹಿಳೆಯರ ತಂಡವು ಈಚೆಗೆ ಶ್ರೀಲಂಕಾದ ಕೊಲಂಬೊದಲ್ಲಿ ಟಿ20 ಕ್ರಿಕೆಟ್ ವಿಶ್ವಕಪ್ ಜಯಿಸಿದ್ದು ಅದಕ್ಕೆ ಕಾರಣ.

'ದೌರ್ಬಲ್ಯಗಳನ್ನು ಮೀರಿ ನಿಂತು ಸಾಧನೆ ಮಾಡುವ ಛಲವಿದ್ದರೆ ಎಲ್ಲವೂ ಸಾಧ್ಯ. ನಮಗೆ ಅವಕಾಶ ಬೇಕು. ಅನುಕಂಪವಲ್ಲ. ಅಂಧರ ಕ್ರಿಕೆಟ್ ಆಡುವ ಅವಕಾಶ ಸಿಕ್ಕಿದ್ದಕ್ಕೆ ಇವತ್ತು ನನ್ನ ಸಾಮರ್ಥ್ಯ ತೋರಿಸಲು ಸಾಧ್ಯವಾಯಿತು. ಅಂದು ನನ್ನನ್ನು ಅವಮಾನಿಸಿದವರಿಗೆ, ಕುಟುಂಬವನ್ನು ಅವಹೇಳನ ಮಾಡಿದವರಿಗೆ ಸಾಧನೆಯ ಮೂಲಕ ಪ್ರತ್ಯುತ್ತರ ಕೊಟ್ಟಿದ್ದೇನೆ' ಎಂದು ದೀಪಿಕಾ ಹೆಮ್ಮೆಯಿಂದ ಹೇಳುತ್ತಾರೆ.

ಈ ತಂಡದಲ್ಲಿ ಕರ್ನಾಟಕದ ಇನ್ನಿಬ್ಬರು ಹುಡುಗಿಯರೂ ಇದ್ದರು.

ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲ್ಲೂಕಿನ ಬರುವೆ ಗ್ರಾಮದ ವಿ. ಕಾವ್ಯಾ ಅವರಿಗೆ ಹುಟ್ಟಿನಿಂದಲೇ ಪೂರ್ಣ ಅಂಧತ್ವ ಕಾಡಿತು. ವೆಂಕಟೇಶ್ ಆಚಾರ್ ಮತ್ತು ಜಯಮ್ಮ ದಂಪತಿಯ ಐವರು ಹೆಣ್ಣುಮಕ್ಕಳಲ್ಲಿ ಕಾವ್ಯಾ ನಾಲ್ಕನೆಯವರು. ಇವರಿಗೆ ಮಾತ್ರ ಅಂಧತ್ವ ಕಾಡಿತು. ಆದರೆ ಶಾಲೆಯಲ್ಲಿದ್ದಾಗಲು ಲಾಂಗ್ ಜಂಪ್ ಹಾಗೂ ಓಟದಲ್ಲಿ ಭಾಗವಹಿಸುತ್ತಿದ್ದರು. 2014ರ ರಾಜ್ಯ ಪ್ಯಾರಾ ಅಥ್ಲೆಟಿಕ್ಸ್ ಮತ್ತು 2016ರಲ್ಲಿ ರಾಷ್ಟ್ರೀಯ ಪ್ಯಾರಾ ಅಥ್ಲೆಟಿಕ್ಸ್‌ನಲ್ಲಿ ಭಾಗವಹಿಸಿದ್ದರು. ಕಾವ್ಯಾ ಪ್ರತಿಭೆಯನ್ನು ಗುರುತಿಸಿದ ಸಮರ್ಥನಂ ಟ್ರಸ್ಟ್ ಕ್ರಿಕೆಟ್ ಆಡಲು ಪ್ರೇರೇಪಿಸಿತು. ಎಲ್ಲ ಸೌಲಭ್ಯಗಳನ್ನು ನೀಡಿತು. ವಿಶ್ವಕಪ್ ಟೂರ್ನಿಯಲ್ಲಿ ಬಿ1 (ಪೂರ್ಣ ಅಂಧತ್ವ) ವಿಭಾಗದ ಆಟಗಾರ್ತಿಯಾಗಿ ಮಿಂಚಿದರು. ಸದ್ಯ ಸ್ನಾತಕೋತ್ತರ ಪದವಿ ಕೂಡ ಓದುತ್ತಿದ್ದಾರೆ.

ತುಮಕೂರು ಜಿಲ್ಲೆಯ ನಾಯಕನ ಪಾಳ್ಯದ ಎನ್.ಆರ್. ಕಾವ್ಯಾ ಕೂಡ ಭಾಗಶಃ ಅಂಧತ್ವ (ಬಿ3) ಇರುವ ಆಟಗಾರ್ತಿ. ಆರು ವರ್ಷದ ಬಾಲಕಿಯಾಗಿದ್ದ ಸಂದರ್ಭದಲ್ಲಿ ಸ್ನೇಹಿತರೊಂದಿಗೆ ಕ್ರಿಕೆಟ್ ಆಡುವಾಗ ಎಡಗಣ್ಣಿಗೆ ಕಲ್ಲು ತೂರಿತ್ತು. ದೃಷ್ಟಿ ಕಿತ್ತುಕೊಂಡಿತ್ತು. ಆದರೆ ಅವರ ಬಾಳಿಗೆ ಬೆಳಕಾಗಿದ್ದು 'ಅಂಧರ ಕ್ರಿಕೆಟ್' ಎಂಬುದು ವಿಶೇಷ. 2017ರಲ್ಲಿ ಸಮರ್ಥನಂ ಟ್ರಸ್ಟ್‌ಗೆ ಸೇರಿ ಒಳ್ಳೆಯ ಆಲ್‌ರೌಂಡರ್ ಆದರು. ಅಂತರರಾಷ್ಟ್ರೀಯ ಅಂಧರ ಕ್ರೀಡಾ ಫೆಡರೇಷನ್ ಇಂಗ್ಲೆಂಡ್‌ನಲ್ಲಿ ಆಯೋಜಿಸಿದ್ದ ವಿಶ್ವಮಟ್ಟದ ಟೂರ್ನಿಯಲ್ಲಿ ಭಾರತ ತಂಡವನ್ನು ಪ್ರತಿನಿಧಿಸಿದ್ದರು. ಅಲ್ಲಿ ಚಿನ್ನದ ಪದಕ ಗೆದ್ದಿದ್ದರು.

ಕ್ರಿಕೆಟ್ ಅಷ್ಟೇ ಅಲ್ಲ. ಅಥ್ಲೆಟಿಕ್ಸ್, ವಾಲ್ ಕ್ಲೈಂಬಿಂಗ್, ರಾಕ್ ಕ್ಲೈಂಬಿಂಗ್‌ನಲ್ಲಿ ಕೂಡ ಭಾಗವಹಿಸುತ್ತಾರೆ. ಸಾಹಸಿ ಮನೋಭಾವದ ಕಾವ್ಯಾ, ಮೈಸೂರು–ಬೆಂಗಳೂರು ಅಲ್ಟ್ರಾ ಮ್ಯಾರಥಾನ್‌ನಲ್ಲಿ ಭಾಗವಹಿಸಿ 'ಲಿಮ್ಕಾ ಬುಕ್ ಆಫ್ ರೆಕಾರ್ಡ್ಸ್' ಸೇರಿದ್ದಾರೆ. ಸಮರ್ಥನಂ ಟ್ರಸ್ಟ್‌ನ ಡಿಜಿಟಲ್ ಗ್ರಂಥಾಲಯದಲ್ಲಿ ಉದ್ಯೋಗಿಯೂ ಆಗಿದ್ದಾರೆ.

ಇವರೊಂದಿಗೆ ತಂಡದಲ್ಲಿದ್ದ ಇನ್ನೂ 13 ಆಟಗಾರ್ತಿಯರ ಕತೆಗಳೂ ಇದೇ ರೀತಿಯದ್ದೇ. ಬಿ1 (ಪೂರ್ಣ ಅಂಧರು) ಕೆಟಗರಿಯಲ್ಲಿ ಆಡಿದ ಆಂಧ್ರದ ಕರುಣಾಕುಮಾರಿ, ಒಡಿಶಾದ ಜಮುನಾ, ಜಾರ್ಖಂಡ್‌ನ ಅನುಕುಮಾರಿ, ಅಸ್ಸಾಂನ ಸಿಮು ದಾಸ್, ಬಿ2 (ಸುಮಾರು 2 ಮೀಟರ್ ದೂರ ನೋಡಬಲ್ಲವರು) ಕೆಟಗರಿಯಲ್ಲಿದ್ದ ಜಮ್ಮು–ಕಾಶ್ಮೀರದ ಅನೇಕಾ ಠಾಕೂರ್, ಒಡಿಶಾದ ಬಸಂತಿ, ಮಧ್ಯಪ್ರದೇಶದ ಸುನೀತಾ ಸರಾಟೆ, ರಾಜಸ್ತಾನದ ಸಿಮ್ರನ್‌ಜೀತ್, ಒಡಿಶಾದ ಪಾರ್ವತಿ, ಬಿ3 ವಿಭಾಗದ ಫುಲಾ ಸುರೇನ್ (ಒಡಿಶಾ), ಗಂಗಾ ಕದಂ (ಮಹಾರಾಷ್ಟ್ರ), ಸುಷ್ಮಾ ಪಾಟೀಲ ಹಾಗೂ ದುರ್ಗಾ (ಮಧ್ಯಪ್ರದೇಶ) ಅವರೆಲ್ಲರೂ ಈಗ ವಿಶ್ವಕಪ್ ಜಯದಿಂದಾಗಿ ಹೊಸ ಬದುಕಿನತ್ತ ಪಯಣಿಸುತ್ತಿದ್ದಾರೆ.

ಕೊಲಂಬೊದಲ್ಲಿ ಫೈನಲ್ ಗೆದ್ದ ನಂತರ ಕಣ್ಣೀರುಗರೆಯುತ್ತ, ತ್ರಿವರ್ಣ ಧ್ವಜ ಹಿಡಿದು ಸಂಭ್ರಮಿಸಿದ ಈ ಹುಡುಗಿಯರು 'ಈಸಬೇಕು ಇದ್ದು ಜೈಸಬೇಕು' ಎಂಬ ನಾಣ್ಣುಡಿಗೇ ಜೀವಸೆಲೆಯಾದರು.

ಸಾಮಾನ್ಯ ಆಟಗಾರರಿಗೆ ತರಬೇತಿ ನೀಡುವಾಗ ಕೋಚ್‌ಗಳು ಹಲವು ಸವಾಲು ಎದುರಿಸುತ್ತಾರೆ. ಅಂತಹದರಲ್ಲಿ ದೃಷ್ಟಿ ಇಲ್ಲದವರಿಗೆ ಬ್ಯಾಟ್, ಚೆಂಡು, ಸ್ಟಂಪ್‌ಗಳನ್ನು ಸ್ಪರ್ಶಿಸಿ ಪರಿಚಯ ಮಾಡಿಸುತ್ತ ಕ್ರಿಕೆಟ್ ಕಲಿಸುವುದು ಸುಲಭದ ಮಾತಲ್ಲ. ಅಂತಹ ಕಠಿಣವಾದ ಸವಾಲನ್ನು ಈ ತಂಡದ ಕೋಚ್ ಆಗಿದ್ದ ಚಂದು ಮತ್ತು ಮ್ಯಾನೇಜರ್ ಶಿಖಾ ಶೆಟ್ಟಿ ಅವರು ಗೆದ್ದಿದ್ದಾರೆ. ಅವರ ನಿರಂತರ ಶ್ರಮಕ್ಕೆ ಫಲ ಸಿಕ್ಕಿದೆ.

***




ಅಂಧ ಮಹಿಳಾ ಟಿ20 ಕ್ರಿಕೆಟ್ ವಿಶ್ವಕಪ್ ಗೆದ್ದು ಭಾವುಕರಾದ ದೀಪಿಕಾ